ಇ) ಇಲ್ಲ.

ಈ) ಬಂದಿದೆ.

ಉ) ಈ ವಿಷಯದ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಇಪ್ಪತ್ತೈದಂಟನೇ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿ ಸಭೆಯ ಮುಂದಿಡಲಾಯಿತು.

ಮುಜರಾಯಿ ದೇವಸ್ಥಾನಗಳಲ್ಲಿ ಅರ್ಚಕರ ನೇಮಕಾತಿ ಬಗ್ಗೆ

೧೭೫೦. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಧಾರ್ಮಿಕ ಮತ್ತು ಪತ್ತಿ ಹಾಗೂ ನಿಯಂತ್ರಿಕ ಮಾರಂಟ್ಟಿ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳೆಷ್ಟು ?

ಆ) ದೇವಸ್ಥಾನದ ಅರ್ಚಕರಿಗೆ ಸರ್ಕಾರದಿಂದ ನೀಡುತ್ತಿರುವ ಸೌಲಭ್ಯಗಳೇನು ?

ಇ) ದೇವಸ್ಥಾನದ ಅರ್ಚಕರಲ್ಲಿ ಪರಿಶಿಷ್ಟ ಜಾತಿ ವರ್ಗದ ಜನರಿದ್ದಾರೆಯೇ. (ಜಿಲ್ಲಾವಾರು ವಿವರ ನೀಡುವುದು) ?

ಈ) ಮುಜರಾಯಿ ದೇವಸ್ಥಾನಗಳಿಗೆ ಪರಿಶಿಷ್ಟ ಜಾತಿ ವರ್ಗದ ಅರ್ಚಕರನ್ನು ನೇಮಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ ?

ಶ್ರೀ ಕೆ. ಅಮರನಾಥ ಶೆಟ್ಟಿ (ಮುಜರಾಯಿ ರಾಜ್ಯ ಸಚಿವರು).—

ಅ) ೪೦,೨೮೦

ಆ) ಆಯಾ ದೇವಸ್ಥಾನದ ಆದಾಯಕ್ಕನು ಗುಣವಾಗಿ, ನಿಗದಿತ ಸಂಬಳ ಮತ್ತು ಸೇವಾರ್ಥದಲ್ಲಿ ಕಮಿಷನ್ ಹಾಗೂ ಕೆಲವಡೆಗಳಲ್ಲಿ ವಸತಿ ಸೌಕರ್ಯ ಕಲ್ಪಿಸಲಾಗುವುದು.

ಇ) ಇದ್ದಾರೆ. ವಿವರ ಪಟ್ಟಿ ಲಗತ್ತಿಸಿದೆ.

ಈ) ಅವಕಾಶವಿದ್ದಲ್ಲಿ ಮಾಡಲಾಗುತ್ತಿದೆ.